Doc-536
T-P-2

(1)

Reg no KRNN 12 ಶ್ರೀ — For Influential Publicity — 21-9-76

ಸ್ವರ್ಣ ಮಹೋತ್ಸವ ನೆರವೇರಿ ವಜ್ರಮಹೋತ್ಸವ ನೇರವೇರಿಸಲಿರುವ ಪತ್ರಿಕೆ

ಸತ್ಯವಾದಿ
SATYAVADI

60 th Diamond Jubilee Year
೬೦ ನೇ ವಜ್ರಮಹೋತ್ಸವ ವರ್ಷ
★ Satyavadi Daily . Mysore 4 ★

ಸಂಸ್ಥಾಪಕರು : ಅರಮನೆ ಶಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ (5 ಪೈಸೆ

ಗೋವು ನಮ್ಮ ಆರ್ಥಿಕ ಜೀವನದ ಪ್ರತೀಕ

ಗೋವನ್ನು ಕಸಾಯಿಖಾನೆಯಿಂದ ಉಳಿಸುವ ಮಾತು ಈಗೀಗ ಕೇಳಿಬರುತ್ತಿದೆ; ಇದೊಂದು ಶುಭ ಸೂಚನೆ : ಸಾಮೂಹಿಕವಾಗಿ ಗೋಹತ್ಯೆಯಿಂದ ಆಗುವ ಹಾನಿ ಜನರ ಗಮನಕ್ಕೆ ಬಂದಿದೆ ; ಶಾಖಾಹಾರಿ ರಾಷ್ಟ್ರದಲ್ಲೂ ಇದೇ ಮಹತ್ವ ವಿಷಯ.

ಗೋವು ಶ್ರೀಕೃಷ್ಣನ ಬೇಸಾಯದ ಜೀವ ; ಅದರ ಬಲದಿಂದಲೇ ಅವನ ಆರ್ಥಿಕ ; ಗೋವನ್ನು ಮಾತೆಯೆಂದು ಕರೆದು ಪೂಜಾ ಯೋಗ್ಯ ಸ್ಥಾನವನ್ನು ಕೊಟ್ಟು ಧಾರ್ಮಿಕ ಪ್ರಶ್ನೆಯನ್ನಾಗಿ ಮಾಡಲಾಗಿದೆ ; ಇದು ಇದರ ಒಂದು ಮುಖ ; ಇನ್ನೊಂದು ಆರ್ಥಿಕ ; ರಾಷ್ಟ್ರದಲ್ಲಿ ಆಹಾರ ವಸ್ತುವನ್ನು ವೃದ್ಧಿಪಡಿಸಿ ಒದಗಿಸಿ ದೇಶದ ಭದ್ರವಾದ ಆರ್ಥಿಕ ವ್ಯವಸ್ಥೆಗೆ ಕಾರಣವಾಗಿದೆ ಈ ವಿಚಾರವನ್ನು ರಾಷ್ಟ್ರೀಯವಾಗಿ ಚರ್ಚಿಸುವ ಕಾಲ ಈಗ ಬಂದಿದೆ

ಒಬ್ಬ ಉದ್ಯೋಗಿಗೆ ಅವನ ಉದ್ಯೋಗ ಜೀವಧೆಯೇ ದೇವರು ; ಉಳುವವನಿಗೆ ನೇಗಲು, ಪೌರಿ ಒಡೆಯುವವನಿಗೆ ಕೊಡಲಿ, ಲೇಖಕನಿಗೆ ಲೇಖನಿ ; ಅದಂತೆ ಕೃಷಿ ಪ್ರಧಾನವಾದ ರಾಷ್ಟ್ರವಾದ ಭಾರತದಲ್ಲಿ ಗೋವು ಹಾಲನ್ನು ಕೊಟ್ಟು, ದವಸಧಾನ್ಯಗಳನ್ನು ಒದಗಿಸುವುದರಿಂದ ಇದೇ ದೇವರು

ಅಲ್ಲದೆ ಗೋವನ್ನು ಎತ್ತಿಗೆ ಜನ್ಮ ಕೊಡುವ ತಾಯಿ ಎಂಬ ದೃಷ್ಟಿಯಿಂದ ನೋಡಿದರೂ ಅದರ ಮಹತ್ವದ ಅರಿವಾಗುತ್ತದೆ ಇದು ನಮ್ಮ ಆರ್ಥಿಕ ವ್ಯವಸ್ಥೆಯ ಕೇಂದ್ರ ಬಿಂದುವಾಗಿದೆ

ಹಿಂದಿನ ಶತಮಾನಗಳಲ್ಲಿ ಇಂಗ್ಲೆಂಡು ದೇಶದಲ್ಲಿ ಕುದುರೆಯು ಆರ್ಥಿಕ ವ್ಯವಸ್ಥೆಯ ಕೇಂದ್ರ ಬಿಂದುವಾಗಿದ್ದಂತೆ, ಇಂದೂ ಭಾರತದಲ್ಲಿ ಗೋವೆ ಆರ್ಥಿಕ ವ್ಯವಸ್ಥೆಯ ಕೇಂದ್ರ ಬಿಂದುವಾಗಿದೆ ; ಇಂಥ ಆರ್ಥಿಕ ವ್ಯವಸ್ಥೆಯ ಕೇಂದ್ರ ಬಿಂದುವಿನತ್ತ ನಮ್ಮ ಸಂಪೂರ್ಣ ಗಮನವಿರಬೇಕು ; ಎಂದರೆ ಗೋವಿನ ಬಗ್ಗೆ ನಾವು ಎಚ್ಚರ ವಹಿಸಬೇಕು ಗೋವಿನ ಸಂಖ್ಯೆ ಬೆಳೆಯುವ ವಿಚಾರದಲ್ಲಿ ಯಾವ ಅಡ್ಡಿಯೂ ಇಲ್ಲ ; ಇದರಬಗ್ಗೆ ಯಾವ ಅಪಾಯವೆಯೂ ಇಲ್ಲ; ಯಾರೂ ಇದಕ್ಕಾಗಿ ಮೈಹಾಯುದ್ಧ ಎಸಾಡಬೇಕಾಗಿಲ್ಲ. ಕಲ್ಲಿದ್ದಲು ಪೆಟ್ರೋಲ್ ಎಣ್ಣೆ ಹೇಗೆ ಶಂಕನ್ಮೂಲವೋ ಹಾಗೆಯೆ ಇದು ನಮ್ಮ ದೇಶದ ಶಂಕನ್ಮೂಲ ; ಆದರೆ ಇವೆರಡಕ್ಕೂ ಅಂತರವಿದೆ. ತೈಲಗಳು ನಿಯಮಿತವಾಗಿ ಸಿಗುತ್ತವೆ ; ಅದ್ದರಿಂದ ಅದನ್ನು ಪಡೆಯಲು ರಾಷ್ಟ್ರಗಳು ಮಹಾಯುದ್ಧಗಳನ್ನು ವಶಾಡುವವು ಗೋಸಂಪತ್ತು ಬೇಕಾದಂತೆ ವೃದ್ಧಿಯಾಗಬಹುದು ಆದ್ದರಿಂದ ಗೋವೃದ್ಧಿಗಾಗಿ ಮಹಾಯುದ್ಧಗಳು ನಡೆಯುವು ; ತೈಲಗಳಿಂದಾಗುವ ಆರ್ಥಿಕ ವ್ಯವಸ್ಥೆ ಅಸಂಕಟಕಾರಿ. ಗೋವಿನಿಂದಾಗುವ ಆರ್ಥಿಕ ವ್ಯವಸ್ಥೆ ನಿರಾತಂಕ.

ಆದ್ದರಿಂದ ಗೋರಕ್ಷಣೆ ನಮ್ಮ ಆರ್ಥಿಕ ವ್ಯವಸ್ಥೆಯ ಸಂಪನ್ಮೂಲ ; ಅದರ ಹತ್ಯೆ ನಮ್ಮ ಮೂಲಭೂತ ಆರ್ಥಿಕ ವ್ಯವಸ್ಥೆಯ ಹತ್ಯೆ

ಖಾದೀ ಹೇಗೆ ನಮ್ಮ ಆರ್ಥಿಕ ವ್ಯವಸ್ಥೆಯ ಮೂಲವೆಂದು ಜನ ಅರಿತರೋ ಹಾಗೆಯೇ ಗೋವನ್ನೂ ನಮ್ಮ ಆರ್ಥಿಕ ವ್ಯವಸ್ಥೆಯ ಮೂಲವೆಂದು ತಿಳಿದು ಅದನ್ನು ರಕ್ಷಿಸುವ ಕಾರ್ಯವನ್ನು ಮಾಡಬೇಕು.

— " ಜೆ. ಪಿ ಕುಮಾರಪ್ಪನವರ ವಿಚಾರಧಾರೆ "

ರಾಜ್ಯದಲ್ಲಿ ಕೋರ್ಟುಗಳಿಗೆ ರಜಾ

ಬೆಂಗಳೂರು — ಹೈಕೋರ್ಟ್ ಮತ್ತಿತರ ಕೆಳಕೋರ್ಟುಗಳಿಗೆ ದಸರಾ ಪ್ರಯುಕ್ತ ಈ ತಿಂಗಳು 24 ರಿಂದ 30 ರ ವರೆಗೆ ಎರಡು ದಿನಗಳು ಸೇರಿ ರಜೆ ಇದೆ

★ ದಸರಾ ಪ್ರಯುಕ್ತ 23 ರಿಂದ ವೃಂದಾವನದಲ್ಲಿ ದೀಪಾಲಂಕಾರ ರಾತ್ರಿ 7 ರಿಂದ 9-30 ರ ವರಗೆ ನಡೆಯುವುದು

ದಸರಾ ಮಹೋತ್ಸವ ಆರಂಭ

ಮೈಸೂರು — ಆರೋಗ್ಯ ಮಂತ್ರಿಯವರಾದ ಶ್ರೀ ಕೆಚ್ ಎಂ ಚನ್ನಬಸಪ್ಪನವರು ಈ ದಿನ ಬೆಳಿಗ್ಗೆ ರಂಗಾಚಾರ್ಲು ನಗರ ಭವನದಲ್ಲಿ ದಸರಾ ಮಹೋತ್ಸವದ ಆರಂಭೋತ್ಸವನ ನೆರವೇರಿಸುತ್ತಾ, ಮೈಸೂರು ನಾಗರೀಕರು ದಸರಾ ಸಂಬ್ರದ ಆಚರಣೆಯನ್ನು ಮಾಡುತ್ತಿರುವದಂ ಹೆಮ್ಮೆಯ ವಿಚಾರ. ಇದರಲ್ಲಿ ಪ್ರತಿ ಮೈಸೂರಿಗನು ಭಾಗವಹಿಸಬೇಕು ಎಂದರು.

ಶ್ರೀ ಎಫ್ ಕೆ ಇಂಜಿನಿಯವರು ಅಧ್ಯಕ್ಷತೆ ವಹಿಸಿದ್ದರು ಕಾರ್ಯದರ್ಶಿಯವರಾದ ಶ್ರೀ ಬಿ ಸಿ. ಲಿಂಗಯ್ಯನವರು ಸ್ವಾಗತ ಮಾಡಿದರು. ಶ್ರೀ ರಾಮು ಚಂದ್ರಾಚಾರ್ರವರು ವಂದನಾರ್ಪಣೆ ಮಾಡಿದರು.

ರೂ. 55 ಲಕ್ಷ ಯೋಜನೆ ಪರಿಶೀಲನೆಗೆ

ಮುದರಾಷು — ಮೈಸೂರು ಹತ್ತಿರದ ಕೃಷ್ಣರಾಜ ಸಾಗರದ ಬೃಂದಾವನ ತೋಟಗಳು ರೂ 55 ಲಕ್ಷ ಖರ್ಚಿನಿಂದ ಪುನರುಜ್ಜೀವನಗೊಳಿಸಲಾಗುವುದೆಂದೂ ತಾವು ಸೂಚಿಸಿರುವ ಈ ಯೋಜನೆಯು ಬೇಗನೆ ಮಂತ್ರಿಮಂಡಲದ ಸಭೆಯಲ್ಲಿ ಚರ್ಚಿಸಲ್ಪಡುವ ಸಂಭವ ಇದೆಯೆಂದು ಕರ್ನಾಟಕದ ಪ್ರವಾಸ ಮಂತ್ರಿ ಶ್ರೀ ಮಹೆಮದಾಲಿಯವರು ಪತ್ರಿಕೆಯವರಿಗೆ ತಿಳಿಸಿದರು

ಲಂಚಕ್ಕಾಗಿ ದಸ್ತಗಿರಿ

ಬೆಂಗಳೂರು — ಬಳ್ಳಾರಿಯಲ್ಲಿ ತೂಕ ಅಳತೆ ಇನ್ಸ್‌ಪೆಕ್ಟರ್ ಒಂದು ಸಂದರ್ಭದಲ್ಲಿ ರೂ. 60 ಲಂಚ ಕೇಳಿ ಸ್ವೀಕರಿಸುತ್ತಿದ್ದಾಗ ದಸ್ತಗಿರಿ ಆದನು.

★ — ★

ವಿಶ್ವ ಸಾಹಿತ್ಯ ಸಂಪುಟ

ಹಂಪಿಗರಿಯಲ್ಲಿ ವಿಶ್ವ ಸಾಹಿತ್ಯ ಇತಿಹಾಸ 5 ಸಾವಿರ ಪುಟಗಳ ೧೧ ಸಂಪುಟಗಳಲ್ಲಿ ಸಿದ್ಧಪಡಿಸಲಾಗುತ್ತಿದೆ

●

ನಾಲ್ಕು ವಾರಿಗಳು ಹುಟ್ಟಿದವು

ಮೈಸೂರು — ಮೃಗಾಲಯದಲ್ಲಿ ಚಂಡಿ ಸಿಂಹಿಣಿ 4 ಮರಿಗಳಿಗೆ ಜನ್ಮವನ್ನಿತ್ತಿತು.

○

ಧಾನ್ಯ ಸಂಗ್ರಹಣೆ ಗುರಿ

ಬೆಂಗಳೂರು — ಭತ್ತ ಬೆಳೆಯುವವರ ಲೆವಿ 2 ವರೆ ಲಕ್ಷ ಟನ್, ಸಾಗಾಣಿಕೆಲೆವಿ 26 ಸಾವಿರ ಟನ್ ಮತ್ತು ಜೋಳದ ಲೆವಿ 60 ಸಾವಿರ ಟನ್ ಈ ವರ್ಷದ ಸಂಗ್ರಹಣೆ ಗುರಿ ಆಗಿದೆ

★ ಮೂರು ಉತ್ತರಾಧಿಕಾರಿ ಬಗ್ಗೆ ಚೀಣ ನಾಯಕರಲ್ಲಿ ಚರ್ಚೆ ಆಗುವ-ತಿದೆ.

MYSORE RACES 1976

SATURDAY 25 th September
(Carried over Treble & Trinella Pools)

SUNDAY 26 th September

[The Mysore 2000 Guineas 1976]

ಬೆಲೆ ಸೂಚಿ ಏರಿಕೆ ಆಗಿದೆ

ಬೆಂಗಳೂರು — ಚಳಕೆವಾರರ ಬೆಲೆ ಸೂಚಿ ಆಗಸ್ಟಿನಲ್ಲಿ ಎಲ್ಲ ಅರಸಿದ ಕೇಂದ್ರಗಳಲ್ಲಿಯೂ ಏರಿದೆ ಎಂಬುದು ಅರ್ಥಿಕ ಮತ್ತು ಅಂಕಿಅಂಶ ಸಂಸ್ಥೆಯ ಪ್ರಕಟಣೆಯಿಂದ ತಿಳಿದು ಬಂದಿದೆ.

ವ್ಯಾಪಾರಿಗಳ ಸಂಘದ ವಿರೋಧ

ಬೆಂಗಳೂರು — ಖಂಡಸಾರಿ ಶಕ್ಕರೆಯ ಮೇಲೆ ಲೆವಿ ಆಜ್ಞೆ ಜಾರಿ ಮಾಡಬೇಕೆಂದಿರುವ ಯೋಜನೆಯನ್ನು ಇದರ ವ್ಯಾಪಾರಿಗಳ ಸಂಘ ವಿರೋಧಿಸಿದೆ.

★

ಕಾರ್ಯಕ್ರಮದಿಂದ ರದ್ದು

ವಿಶ್ವಸಂಸ್ಥೆ — ಉತ್ತರ ಕೊರಿಯ ಹಾಗೂ ದಕ್ಷಿಣ ಕೊರಿಯಾ ಸಮ್ಮತಿಯ ಪ್ರಕಾರ, ಕೊರಿಯಾ ಏಕ್ಯ ಸಂಬಂಧದ ಯೋಜಿತ ಚರ್ಚೆಯನ್ನು ಜನರಲ್ ಅಸೆಂಬ್ಲಿಯ 31 ನೇ ಅಧಿವೇಶನದ ಕಾರ್ಯಕ್ರಮದಿಂದ ರದ್ದುಗೊಳಿಸಿತು.

★

ಹಾವನ್ನು ಕಪ್ಪೆ ನುಂಗಿತು

ಷಿಲಾಂಗ್ — ಹಾವು ಕಪ್ಪೆಯನ್ನು ನುಂಗುವುದು ಸಾಧಾರಣ ವಿಚಾರ ಆದರೂ, ಗೌಹತಿಯ ಪಕ್ಕಬಾರಿ ಭಾಗದಲ್ಲಿ ಕಪ್ಪೆಯೊಂದು ಹಾವನ್ನು ನುಂಗಿದುದನ್ನು ಕಂಡು ಆಶ್ಚರ್ಯಗೊಂಡರು.

Remember

You are quite safe in your dealings with

Bank Road Bahusar

Firm Noted for Genuine Good Business

ವಜ್ರ ಮಹೋತ್ಸವ

ಭಗವಂತನ ಕೃಪೆಯಿಂದ "ಸತ್ಯವಾದಿ" ಯು 60 ನೇ ವರ್ಷ ಅರ್ಥಾತ್ ವಜ್ರ ಮಹೋತ್ಸವ ವರ್ಷವನ್ನು ಪ್ರವೇಶಿಸಿರುವುದೆಂಬುದನ್ನು ತಿಳಿಸಲು ಹರ್ಷಿಸುತ್ತೇವೆ.

ಸ್ವರ್ಣಮಹೋತ್ಸವ ಕಾಲದಲ್ಲಿ ದೊರೆತ ಶ್ರೀ ಜಗದ್ಗುರುಗಳವರ, ಶ್ರೀ ಸ್ವಾಮಿಗಳವರ ಆಶೀರ್ವಾದ ಅನುಗ್ರಹವನ್ನು, ಉದಾರತೆಯಿಂದ ಕೂಡಿದ ಮಹನೀಯರ ನೆರವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಂಡು, ರಾಜ್ಯದ ಪ್ರಪ್ರಥಮ ವಜ್ರ ಮಹೋತ್ಸವದ ಯಶಸ್ವಿ ನೆರವೇರುವಿಕೆಗೆ ಪೂರ್ಣ ಸಹಾಯ ದೊರೆಯುವುದೆಂಬ ವಿಶ್ವಾಸ ಹೊಂದಿದ್ದೇವೆ.

ಭಾರತದಲ್ಲಿ ಗೋವಧೆ

ಪೂರ್ಣ ನಿಷೇಧವಾಗಲಿ

Protect the Cow

ವುಡ್‌ಲಾಂಡ್ಸ್ 24 9 76 ರಿಂ

ಅಮೋಘ ಆರಂಭ

ರಂಗೀಲಾ ರತನ್

ಹಿಂದಿ

ಕಲರ್

ರಿಷಿಕಪೂರ್ ಪರ್ವೀಣಾಬಿ ಅಶೋಕಕುಮಾರ್ ಅಜಿತ್ ಅಭಿನಯ

ದಿನ 3 ಪ್ರದರ್ಶನಗಳು

ಅಪೇರಾ 17 9 76 ರಿಂದ

ವಿಜಯವಾಣಿ

ಶ್ರೀನಾಥ್ ಕಲ್ಪನ ದ್ವಾರಕೀಶ್ ರಾಜಾಶಂಕರ್ ಅಭಿನಯ

ಕನ್ನಡ

ಪ್ರತಿ ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

Contribute Liberally to the National Defence Fund

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore 4